# ಸರಕಾರಿ ಪ್ರೌಢ ಶಾಲೆ ಗುಂಡ ತಾ : ಸಿಂಧನೂರು ಜಿ : ರಾಯಚೂರು

## ಸಮಾಜ ವಿಜ್ಞಾನ ಮಾದರಿ ಪ್ರಶ್ನೆ ಪತ್ರಿಕೆ - 2 2014 – 15

ತರಗತಿ : 10 ನೇ ತರಗತಿ ಅಂಕಗಳು : 80

ಸಮಯ : 3 ಗಂಟೆ ದಿನಾಂಕ :

---

**ಪ್ರಶ್ನೆ 1] ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ. 10 x 1 = 10**

1. ಪಂಜಾಬಿನ ಸಿಂಹ ಎಂದು ಖ್ಯಾತಿ ಹೊಂದಿದವರು.

   ಅ) ಟಿಪ್ಪು ಸುಲ್ತಾನ ಬ) ದುಲಿಪ್ ಸಿಂಗ್ ಕ) ರಣಜಿತ್ ಸಿಂಗ್ ಡ) ಹೈದರ ಅಲಿ

2. ಸಂಸ್ಥಾನಗಳ ವಿಲೀನಿಕರಣದ ನೇತಾರ.

   ಅ) ಸರ್ಧಾರ್ ವಲ್ಲಭಬಾಯಿ ಪಟೇಲ ಬ) ಜವಾಹರಲಾಲ ನೆಹರು

   ಕ) ಗಾಂಧೀಜಿ ಡ) ಡಾ. ರಾಜೇಂದ್ರ ಪ್ರಸಾದ

3. ಭಾರತ & ಶ್ರೀಲಂಕಾ ಸಂಬಂಧ ಐತಿಹಾಸಿಕವಾದುದು. ಈ ಕೆಳಗಿನ ಹೇಳಿಕೆಗಳಿಂದ ಪುಷ್ಟಿಕರಿಸುತ್ತದೆ.

   ಅ) ವ್ಯಾಪಾರದ ದೃಷ್ಟಿಕೋನದಿಂದ ಬ) ರಾಮಾಯಣ ಕಾಲದಿಂದ

   ಕ) ಸೇನಾ ಕಾರಣದಿಂದ ಡ) ಶಾಂತಿ ಒಪ್ಪಂದದಿಂದ

4. ವಿಶ್ವ ಆರೋಗ್ಯ ಸಂಸ್ಥೆಯ ಮಹಾನ್ ಸಾಧನೆ ಇದಾಗಿದೆ.

   ಅ) ಏಡ್ಸ್ ನಿಯಂತ್ರಣ ಬ) ಕಾಲರಾ ನಿರ್ಮೂಲನೆ ಕ) ಪ್ಲೇಗ್ ನಿರ್ಮೂಲನೆ ಡ) ಸಿಡುಬು ರೋಗದ ನಿವಾರಣೆ

5. ವರದಕ್ಷಿಣೆ ನಿಷೇಧ ಕಾಯ್ದೆ : 1961 : : ಬಾಲ ಕಾರ್ಮಿಕ ನಿಷೇಧ ಕಾಯ್ದೆ : __________

   ಅ) 1980 ಬ) 1982 ಕ) 1986 ಡ) 1990

6. ಕರ್ನಾಟಕದ ದೊಡ್ಡ ನೀರಾವರಿ ಯೋಜನೆ __________

   ಅ) ದಾಮೋದರ ನದಿ ಕಣಿವೆ ಯೋಜನೆ ಬ) ಬಾಕ್ರಾನಂಗಲ್ ಯೋಜನೆ

   ಕ) ಹಿರಾಕುಡ್ ಯೋಜನೆ ಡ) ಕೃಷ್ಣ ಮೇಲ್ದಂಡೆ ಯೋಜನೆ

7. ಭಾರತದ ಗೋದಿಯ ಕಣಜ __________

   ಅ) ಉತ್ತರ ಪ್ರದೇಶ ಬ) ಪಂಜಾಬ ಕ) ಪಶ್ಚಿಮ ಬಂಗಾಳ ಡ) ಮಹಾರಾಷ್ಟ್ರ

8. ಮಾನವ ಅಭಿವೃದ್ಧಿ ಸೂಚಿಯನ್ನು ಈ ಕೆಳಗಿನ ಅಂಶದಿಂದ ಪರಿಗಣಿಸಲಾಗುವದಿಲ್ಲ.

   ಅ) ತಲಾ ಆದಾಯ ಬ) ನಿರೀಕ್ಷಿತ ಜೀವಿತಾವಧಿ ಕ) ಶೈಕ್ಷಣಿಕ ಸಾಧನೆ ಡ) ಜೀವನ ಮಟ್ಟ

9. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ವಿತರಿಸುವ ಇಲಾಖೆ __________

   ಅ) ಭಾರತೀಯ ಸ್ಟೇಟ್ ಬ್ಯಾಂಕ್ ಬ) ರೇಲ್ವೆ ಇಲಾಖೆ ಕ) ಭಾರತೀಯ ಅಂಚೆ ಇಲಾಖೆ ಡ) ರಿಜರ್ವ ಬ್ಯಾಂಕ್

10. ಜೆಟ್ ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು.

    ಅ) ವರ್ಗೀಸ್ ಕುರಿಯನ್ ಬ) ಡಾ. ಪ್ರತಾಪರಡ್ಡಿ ಕ) ನಾರಾಯಣ ಮೂರ್ತಿ ಡ) ನರೇಶ್ ಗೋಯಲ್

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 14 x 1 = 14**

11. ಬ್ರಿಟಿಷರ ಆಗಮನದಿಂದ ಚರಿತ್ರೆಯ ಬರವಣಿಗೆಯ ಮೇಲಾದ ಪ್ರಭಾವವೇನು?

12. ಗೋವಾವನ್ನು ಪೋರ್ಚಗೀಸರಿಂದ ಹೇಗೆ ಮುಕ್ತಿಗೊಳಿಸಲಾಯಿತು?

13. ಅಮೇರಿಕ ಆರ್ಥಿಕ ಮಹಾಕುಸಿತದಿಂದ ಹೇಗೆ ಹೊರ ಬಂದಿತು?

14. ಕೋಮುವಾದ ದೇಶದ ಐಕ್ಯತೆಗೆ ಮಾರಕ , ಈ ಹೇಳಿಕೆಯನ್ನು ವಿಶ್ಲೇಷಿಸಿ.

15. ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಎಂದು ನೀವು ಹೇಗೆ ಹೇಳುವಿರಿ.

16. ಬಾಲ ಕಾರ್ಮಿಕ ವಿರೋಧಿ ಕಾಯ್ದೆ ಉಲ್ಲಂಘಿಸಿದ ಉದ್ಯೋಗಪತಿಗಳು ಕಡ್ಡಾಯವಾಗಿ ಭರಿಸಬೇಕಾದ್ದು ಏನು?

17. ಅಕ್ಟೋಬರ್ ತಿಂಗಳಲ್ಲಿ ಉಷ್ಣಾಂಶವು ಉತ್ತರಾರ್ಧಗೋಳದಲ್ಲಿ ಕಡಿಮೆಯಾಗಲು ಕಾರಣವೇನು?

18. ಸುವರ್ಣಕ್ರಾಂತಿ ಎಂದರೇನು?

19. ಮ್ಯಾಂಗನೀಸ್ ಅದಿರನ್ನು ಒಂದು ಮಿಶ್ರ ಲೋಹವೆಂದು ಕರೆಯುತ್ತಾರೆ, ಈ ಹೇಳಿಕೆಯನ್ನು ವಿಮರ್ಶಿಸಿ

20. ಮುಂಬೈಯನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯುತ್ತಾರೆ ಏಕೆ?

21. ತಲಾ ಆದಾಯವು ಅಭಿವೃದ್ಧಿಯ ನೈಜ ಮಾಪನವಾಗಲಾರದು ಹೇಗೆ? ಚರ್ಚಿಸಿ.

22. ಸಾರ್ವಜನಿಕ ಹಣಕಾಸಿನ ಅರ್ಥ ತಿಳಿಸಿ.

23. ಧೀರೂಬಾಯಿ ಅಂಬಾನಿಯವರು ಸ್ಥಾಪಿಸಿದ ಸಂಸ್ಥೆಯ ಯಾವುದು?

24. ಮಾನವರು ಪೂರ್ವಾಗ್ರಹಕ್ಕೆ ಒಳಗಾಗುವದರಿಂದ ಉಂಟಾಗುವ ಪರಿಣಾಮಗಳೇನು?

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 15 x 2 = 30**

25. ಯುರೋಪಿಯನ್ನರಿಗೆ ಭಾರತದ ಸಾಂಬಾರ ಪದಾರ್ಥಗಳು ಬಹಳ ಪ್ರಿಯವಾಗಿದ್ದವು ಎಂಬುದನ್ನು ಹೇಗೆ ಹೇಳುವಿರಿ.

26. ಟಿಪ್ಪು ಯುದ್ಧಕ್ಕೆ ಸಜ್ಜುಗೊಂಡ ಬಗೆಯನ್ನು ತಿಳಿಸಿ.

27. ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಸರ್ ಅಹಮದ್ ಖಾನರ ಪಾತ್ರವೇನು?. ಅಥವಾ

ಬ್ರಹ್ಮ ಸಮಾಜದ ಬೋಧನೆಗಳಾವುವು?

28. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳಾವುವು?

29. ಲಾಭಕೋರತನ ಎಂದರೇನು? ಉದಾಹರಣೆ ಕೊಡಿ.

30. ಆರ್ಥಿಕ ಅಸಮಾನತೆಯ ನಿವಾರಣೆಗೆ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳಾವುವು?

31. ಸ್ವ-ಸಹಾಯ ಸಮೂಹ ಎಂದರೇನು?

32. ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳಾವುವು?

33. ಮಣ್ಣಿನ ಸವೆತ ತಡೆಗಟ್ಟಲು ಅನುಸರಿಸಬೇಕಾದ ಕ್ರಮಗಳಾವುವು?ತಿಳಿಸಿ.

34. ನಿತ್ಯ ಹರಿದ್ವರ್ಣ ಕಾಡುಗಳ ಲಕ್ಷಣ & ಹಂಚಿಕೆಯನ್ನು ತಿಳಿಸಿ.

35. ಸಂಪರ್ಕ ಮಾಧ್ಯಮದ ಪ್ರಭಾವದಿಂದ ಜಗತ್ತು ಕಿರಿದಾಗಿದೆ ಎಂದು ಹೇಗೆ ಹೇಳುವಿರಿ.

36.ಜನಸಂಖ್ಯಾ ಹಂಚಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

37. ಆರ್ಥಿಕ ಯೋಜನೆ ಎಂದರೇನು?

38. ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಕೈಗೊಳ್ಳಬೇಕಾದ ಪರಿಹಾರೋಪಾಯಗಳೇನು?

39. ಜಾಗತೀಕರಣದ ಮುಖ್ಯ ಲಕ್ಷಣಗಳನ್ನು ತಿಳಿಸಿ.

**ಪ್ರಶ್ನೆ 4] ಈ ಕೆಳಗಿನ ಪ್ರಶ್ನೆಗಳಿಗೆ 4 – 5 ವಾಕ್ಯಗಳಲ್ಲಿ ಉತ್ತರಿಸಿರಿ. 6 x 3 = 18**

40. 1857ರ ದಂಗೆಯಿಂದಾಗಿ ಬ್ರಿಟಿಷರು ತಮ್ಮ ಆಡಳಿತದಲ್ಲಿ ತಂದ ಪ್ರಮುಖ ಬದಲಾವಣೆಗಳೇನು? ಅಥವಾ

ಇಂಗ್ಲೀಷ್ ಶಿಕ್ಷಣ ಪದ್ಧತಿ ಭಾರತದ ಸ್ವಾತಂತ್ರ್ಯ ಚಳುವಳಿಗೆ ಹೇಗೆ ಸ್ಪೂರ್ತಿ ನೀಡಿತು?

41. ದಕ್ಷಿಣ ಆಫ್ರಿಕಾದಲ್ಲಿ ಅನುಸರಿಸಿದ ವರ್ಣಭೇದ ನೀತಿಯ ಬಗ್ಗೆ ವಿವರಿಸಿ. ಅಥವಾ

ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವುವು?

42. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು? ಸಾಮಾಜಿಕ ಸ್ತರ ವಿನ್ಯಾಸವು ಹೇಗೆ ಉಂಟಾಗುತ್ತದೆ? ಅಥವಾ

ನಿರುದ್ಯೋಗ ಸಮಸ್ಯೆಗೆ ಪರಿಹಾರ ಕ್ರಮಗಳಾವುವು?

43. ಸುವರ್ಣ ಚತುಷ್ಕೋನ & ಕಾರಿಡಾರ್ ಹೆದ್ದಾರಿಗಳು ಆರ್ಥಿಕ ಅಭಿವೃದ್ಧಿಗೆ ಹೇಗೆ ಪೂರಕವಾಗಿವೆ? ವಿವರಿಸಿ. ಅಥವಾ

ಭಾರತದಲ್ಲಿರುವ ಕೈಗಾರಿಕಾ ವಲಯಗಳ ಪಟ್ಟಿ ತಯಾರಿಸಿ.

44. ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ವಿವರಿಸಿ. ಅಥವಾ

ಸಾರ್ವಜನಿಕ ಹಣಕಾಸು & ವೈಯಕ್ತಿಕ ಹಣಕಾಸುಗಳ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.

45. ಬ್ಯಾಂಕ್ ಖಾತೆ ತೆರೆಯುವದರಿಂದಾಗುವ ಅನುಕೂಲಗಳೇನು? ತಿಳಿಸಿರಿ. ಅಥವಾ

ಜೀವ ವಿಮೆ & ಸಾಮಾನ್ಯ ವಿಮೆಯ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿ.

**ಪ್ರಶ್ನೆ 5] ಈ ಕೆಳಗನ ಪ್ರಶ್ನೆಗೆ 8 – 10 ವಾಕ್ಯಗಳಲ್ಲಿ ಉತ್ತರಿಸಿ. 1 x 4 = 4**

46. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಸ್ ಚಂದ್ರ ಬೋಸರ ಸಾಧನೆಗಳನ್ನು ವಿವರಿಸಿ.

**ಪ್ರಶ್ನೆ 6] 47. ಭಾರತದ ನಕ್ಷೆಯನ್ನು ಬರೆದು ಕೆಳಗಿನವುಗಳನ್ನು ಗುರುತಿಸಿ. 1 + 3 = 4**

ಎ) ರೂಮ್ಕಿ. ಬಿ) ನರ್ಮದಾ ನದಿ ಸಿ) ಸಿಂಗಭೂಮ್

ಶರಣಬಸಪ್ಪ ಎಲ್ ಗುಡೂರು ಸಶಿ ಸರಕಾರಿ ಪ್ರೌಢಶಾಲೆ ಗುಂಡ ತಾ : ಸಿಂಧನೂರು ಜಿ : ರಾಯಚೂರು